project → Kumara park.

This Document Consists of ... Sheets

First Sheet of Document No. ... of Book I

# ವಿಲ್ ಯಾನೆ ಮರಣ ಶಾಸನ ಪತ್ರ

ಸನ್ ಸಾವಿರದ ಒಂಭೈನೂರ ತೊಂಬತ್ತರನೇ ಇಸವಿ ಡಿಸೆಂಬರ್ ಮಾಹೆ ... ದಿನಾಂಕ: ಇಪ್ಪತ್ತೆಂಟು, ಬೆಂಗಳೂರು–20, ಕುಮಾರ ಪಾರ್ಕ (ಪಶ್ಚಿಮ) ವೆಂಕಟಸ್ವಾಮಿ ರಾಜು ರಸ್ತೆ, ಮನೆ ನಂ.30, 31ರ ವಾಸಿ 85ವರ್ಷ ವಯಸ್ಸಿನ ಬಿ.ಎಂ. ಶಂಕರಯ್ಯ ಬಿನ್ ಲೇಟ್ ಮುನಿವೆಂಕಟಪ್ಪ ಯಾನೆ ಅಣ್ಣಯ್ಯಪ್ಪ ಆದ ನಾನು ಬರೆಯಿಸಿಟ್ಟ ಕೊನೆಯ ವಿಲ್ ಯಾನೆ ಮರಣ ಶಾಸನ ಪತ್ರ ಏನೆಂದರೆ ನನಗೆ ಲೇಟ್ ಪಾರ್ವತಮ್ಮ ಎಂಬ ಹಿರಿಯ ಹೆಂಡತಿ ಹೊಟ್ಟೆಯಲ್ಲಿ ಶಂಕರಮ್ಮ ಎಂಬ ಮಗಳು ಮತ್ತು ಬಿ.ಎಸ್. ನಂಜುಂಡಪ್ಪ ಎಂಬ ಮಗನು ಮತ್ತು ಲಕ್ಷ್ಮೀಕಾಂತ ಎಂಬ ಮಗಳು ಈ ರೀತ್ಯ ಮೂರು ಜನ ಹುಟ್ಟಿದ್ದು ಎರಡನೇ ಹೆಂಡತಿ ನಾಗರತ್ನಮ್ಮನ ಹೊಟ್ಟೆಯಲ್ಲಿ, ಬಿ.ಎಸ್. ನಿರ್ಮಲಾದೇವಿ ಎಂಬ ಮಗಳು, ಬಿ.ಎಸ್. ಲೋಕೇಶ್ ಎಂಬ ಮಗನು, ಬಿ.ಎಸ್. ಗಂಗಾಧರ ಎಂಬ ಮಗನು ಹಾಗೂ ಬಿ.ಎಸ್. ಗಾಯತ್ರಿದೇವಿ, ಎಂಬ ಮಗಳು ಹಾಗೂ ಬಿ.ಎಸ್.ಉದಯಶಂಕರ್, ಬಿ.ಎಸ್. ರವಿಶಂಕರ್ ಮತ್ತು ಬಿ.ಎಸ್. ಪ್ರಭುಶಂಕರ್ ಎಂಬ ಮಕ್ಕಳು ಹುಟ್ಟಿರುತ್ತಾರೆ. ಈ ಪ್ರಕಾರ ಒಟ್ಟು ಹತ್ತು ಜನ ಮಕ್ಕಳು ಇರುತ್ತಾರೆ. ಈ ಪೈಕಿ ನಾಲ್ಕು ಜನ ಹೆಣ್ಣು ಮಕ್ಕಳಿಗೆ ಯಾವುದೇ ಕುಂದು ಕೊರತೆಯಿಲ್ಲದಂತೆ ವಿವಾಹ ಮಾಡಿದ್ದು ಅವರೆಲ್ಲರೂ ಅವರ ಗಂಡಂದಿರ ಮನೆಯಲ್ಲಿ ಸುಖದಿಂದ ಜೀವಿಸುತ್ತಿದ್ದಾರೆ. ಮತ್ತು ಗಂಡು ಮಕ್ಕಳೆಲ್ಲರಿಗೂ ನಾನು ಕಷ್ಟಾರ್ಜಿತ ಸಂಪಾದನೆಯಿಂದ ಸಾಕಿ, ಸಲುಹಿ, ವಿದ್ಯಾಭ್ಯಾಸ ಎಲ್ಲವನ್ನೂ ಮಾಡಿಸಿ ಅವರೆಲ್ಲರೂ ಸ್ವತಂತ್ರವಾಗಿ ಜೀವಿಸುವಂತೆ ಅವರೆಲ್ಲರಿಗೂ ಏರ್ಪಾಡು ಮಾಡಿದ್ದು, ಗಂಡು ಮಕ್ಕಳಲ್ಲಿ ನಾನು ಐದು ಜನರಿಗೆ ವಿವಾಹವನ್ನೂ ಸಹ ಮಾಡಿಸಿದ್ದು, ಉಳಿದ ಕೊನೆಯ ಮಗ ಬಿ.ಎಸ್. ಪ್ರಭು ಶಂಕರ್ ಇವರು ಅವಿವಾಹಿತರಾಗಿರುತ್ತಾರೆ. ನನ್ನದು ಕಷ್ಟಪಟ್ಟು ಸಂಪಾದನೆ ಮಾಡಿರತಕ್ಕ ಸ್ವಯಾರ್ಜಿತ ಸಂಪಾದನೆಯಿಂದ ಕೂಡಿರುವ ಸ್ವತ್ತುಗಳು. ಈ ಸ್ವತ್ತುಗಳ ಬಗ್ಗೆ ನನ್ನ ಮರಣಾ ನಂತರ ಯಾವುದೇ ರೀತಿ ಕಲಹಕ್ಕೆ ಅವಕಾಶಗಳು ಇರಬಾರದೆಂಬ ಉದ್ದೇಶದಿಂದ ಮತ್ತು ನನ್ನ ಮಕ್ಕಳೆಲ್ಲರೂ ಸೌಹಾರ್ದತೆಯಿಂದ ಇರಬೇಕೆಂಬ ಇರಾದ ಉಳ್ಳವನಾಗಿ ನಾನು ಪೂರ್ವಾಪರ ಆಲೋಚನೆ ಮಾಡಿ ಯಾರು ಯಾವುದೇ ವಿಧವಾದ ಮೋಸಕ್ಕೂ, ಬಲತ್ಕಾರಕ್ಕೂ ಮಣಿಯದೆ ನನ್ನ ಬುದ್ಧಿ ಶಕ್ತಿಗಳೆಲ್ಲವೂ ನನ್ನ ಸಂಪೂರ್ಣ ಹತೋಟಿಯಲ್ಲಿ ಇರುವಾಗಲೇ ನಾನು ಆರೋಗ್ಯ

ಪುಟ 2ಕ್ಕೆ

Gandhinagar

1 ... and ... 1.30

28 DEC 1992 B.M. Shankaranarayana

| | Rs. Ps. |
|---|---|
| Registration | 80 – |
| Copying ( lines) | 18 – |
| Copying Endorsements | 2 – |
| Misc. Fee U/s. | 20 – |
| Postage | |
| S. B. | |
| Total Rs. | 120 – |

Regd. as No. 252 of 92-93
Page No. 197 Volume 1600 of Book I
201
Date 19/1/1993 Joint Sub-Registrar
Bangalore Gandhinagar

Jt. SR

SEAL OF THE SUB-REGISTRAR BANGALORE GANDHINAGAR

EXECUTION ADMITTED BY

IDENTIFIED BY

Harish. (HARISH)
57, 3rd B Cross
Lalbagh Road
Bangalore 560027.

Joint Sub-Registrar
Gandhinagar, Bangalore
28 DEC 1992

of Document No.

Book No.



ವಂತನಾಗಿರುವಾಗಲೇ ಈ ವಿಲ್ ಮೂಲಕ ನನ್ನ ಆಸ್ತಿಗಳನ್ನು ಈ ಕೆಳಗೆ ಕಾಣಿಸಿದಂತೆ ನನ್ನ ಮಕ್ಕಳಿಗೆ ಸೇರುವ ಬಗ್ಗೆ ನನ್ನ ಇಚ್ಛೆಯನ್ನು ಈ ವಿಲ್‌ಗೆ ಸಾಕ್ಷಿ ಹಾಕಿರುವವರ ಎದುರಿನಲ್ಲಿ ಬರೆಸಿಟ್ಟಿರುತ್ತೇನೆ. ನನ್ನ ಗಂಡು ಮಕ್ಕಳ ಪೈಕಿ ಮೂರನೇಯ ಮಗ ಬಿ.ಎಸ್ ಗಂಗಾಧರನಿಗೆ ಮಕ್ಕಳ ಸಂತಾನವೇ ಇಲ್ಲವಾಗಿದ್ದು ಈತನಿಗೆ ನಾನು ಆಸ್ತಿಯನ್ನು ಬರೆಯಲು ಇಷ್ಟ ಪಡದೇ, ಈತನಿಗೆ ಬದಲಾಗಿ ಈತನ ಧರ್ಮಪತ್ನಿಯಾದ ಹಾಗೂ ನನ್ನ ಸೊಸೆಯಾದ ಶ್ರೀಮತಿ ರೇಣುಕಾ ಗಂಗಾಧರ ಮತ್ತು ನನ್ನ ಒಂದನೇ ಮಗ ಬಿ.ಎಸ್. ನಂಜುಂಡಪ್ಪ ಹಾಗೂ ಎರಡನೇ ಮಗ ಬಿ.ಎಸ್. ಲೋಕೇಶ್, ನಾಲ್ಕನೇ ಮಗ ಬಿ.ಎಸ್. ಉದಯಶಂಕರ, 5ನೇ ಮಗ ಬಿ.ಎಸ್. ರವಿಶಂಕರ, 6ನೇ ಮಗ ಬಿ .ಎಸ್. ಪ್ರಭು ಶಂಕರ್ ಇವರುಗಳಿಗೆ ಈ ಕೆಳಕಂಡಂತೆ ಆಸ್ತಿಗಳು ನನ್ನ ಮರಣಾಂತರ ಸೇರುವ ಬಗ್ಗೆ ಬರೆಸಿಟ್ಟಿರುತ್ತೇನೆ. ನನ್ನ ಒಟ್ಟು ಆಸ್ತಿಯಾದ ಬೆಂಗಳೂರು ಕುಮಾರ ಪಾರ್ಕ್ ಪಶ್ಚಿಮ, ವೆಂಕಟಸ್ವಾಮಿ ರಾಜು ರಸ್ತೆಯಲ್ಲಿರುವ ಮನೆ ನಂ.30 ಮತ್ತು 31ರ ಸ್ವತ್ತುಗಳು ಇದ್ದು ಹಾಗೂ ಬೆಂಗಳೂರು ದಕ್ಷಿಣ ತಾಲ್ಲೂಕು ವರ್ತೂರು ಗ್ರಾಮದ ಬಳಿ ಜಮೀನು ಇದ್ದು ಮತ್ತು ತರೀಕೆರೆ ತಾಲ್ಲೂಕು ಲಕ್ಕವಳ್ಳಿ ಹೋಬಳಿ ಬಾವಿಕೆರೆ ಗ್ರಾಮದಲ್ಲಿ ನಾಗಪ್ಪನವರ ಮಗ ಬೀಲೂರಪ್ಪನವರಿಂದ ಖರೀದಿಸಿರುವ ತರಿ ಜಮೀನು ಇದ್ದು ಈ ರೀತಿ ಮೂರು ಸ್ಥಿರ ಸ್ವತ್ತುಗಳು ಇರುತ್ತದೆ. ಈ ಸ್ಥಿರ ಸ್ವತ್ತುಗಳೆಲ್ಲಾ ನನ್ನ ಒಂದನೇ ಮಗನಾದ ಬಿ.ಎಸ್. ನಂಜುಂಡಪ್ಪನಿಗೂ ಹಾಗೂ ಎರಡನೆಯ ಮಗ ಬಿ.ಎಸ್. ಲೋಕೇಶ್ ಇವರಿಗೂ ಹಾಗೂ ಮೂರನೆಯ ಮಗನ ಹೆಂಡತಿಯಾದ ಮತ್ತು ನನ್ನ ಸೊಸೆಯಾದ ಶ್ರೀಮತಿ ರೇಣುಕಾ ಗಂಗಾಧರ ಅವರಿಗೂ ಹಾಗೂ ನಾಲ್ಕನೆಯ ಮಗ ಬಿ.ಎಸ್. ಉದಯಶಂಕರ್ ಹಾಗೂ ಐದನೇಯ ಮಗ ಬಿ.ಎಸ್. ರವಿಶಂಕರ್ ಹಾಗೂ 6ನೇ ಮಗನಾದ ಬಿ.ಎಸ್. ಪ್ರಭುಶಂಕರ್ ಇವರುಗಳಿಗೆ ಸೇರುವ ಬಗ್ಗೆ ನನ್ನ ಇಚ್ಛೆಯನ್ನು ಬರೆಸಿಟ್ಟಿರುತ್ತೇನೆ. ನನ್ನ ಮರಣಾ ನಂತರ ಮೇಲ್ಕಂಡ ಪೂರ್ತಾ ಸ್ವತ್ತನ್ನು ಈ ಆರು ಜನ ಸಮನಾಗಿ ಅನುಭವಿಸ ತಕ್ಕದ್ದಾಗಿದೆ. ನನ್ನ ಮೂರನೆಯ ಮಗನಾದ ಬಿ.ಎಸ್.ಗಂಗಾಧರನ ಹೆಂಡತಿ ಶ್ರೀಮತಿ ರೇಣುಕಾ ಗಂಗಾಧರ ಮತ್ತು ಬಿ.ಎಸ್. ರವಿಶಂಕರನ ಹೆಂಡತಿ ವೈಶಾಲಿರವರಿಗೂ ವಿವಾಹವಾಗಿದ್ದು ಹಾಗೂ ಬಿ.ಎಸ್. ಪ್ರಭುಶಂಕರ್ ಇವನಿಗೆ ಮದುವೆಯಾಗಿ ಮಕ್ಕಳ ಸಂತಾನ ಇಲ್ಲದಿದ್ದಲ್ಲಿ ನನ್ನ ನಂತರ ಅವರವರ ಭಾಗಕ್ಕೆ ಸೇರಿದ ಆರನೇ ಒಂದು ಭಾಗದ ಸ್ವತ್ತನ್ನು ರೇಣುಕಾ ಗಂಗಾಧರ ಹಾಗೂ ಆಕೆಯ ಗಂಡ ಹಾಗೂ ಬಿ.ಎಸ್. ರವಿಶಂಕರ್ ಮತ್ತು ಆತನ ಪತ್ನಿ ವೈಶಾಲಿ ಮತ್ತು ಬಿ.ಎಸ್.ಪ್ರಭುಶಂಕರ್ ಮತ್ತು ಅವನ ಪತ್ನಿ ಇವರುಗಳು ಅವರ ಜೀವನ ಪರ್ಯಂತ ಆಸ್ತಿಯನ್ನು ಪೋಲು ಮಾಡದಂತೆ ಅದರ ಉತ್ಪತ್ತಿಯನ್ನು ಅನುಭವಿಸುವ

ಪುಟ 3ಕ್ಕೆ

ಹಕ್ಕುಳ್ಳವರಾಗಿರುತ್ತಾರೆ. ಅವರವರ ಗಂಡ ಹೆಂಡತಿ ಮರಣಾ ನಂತರ ಅವರ ಭಾಗಕ್ಕೆ ಸೇರಿದ ಆರನೇ ಒಂದು ಭಾಗದ ಸ್ವತ್ತು ನನ್ನ ಉಳಿದ ಸಂತಾನವಿರುವ ಗಂಡು ಮಕ್ಕಳು ಮತ್ತು ಉಳಿದ ಗಂಡು ಮಕ್ಕಳಲ್ಲಿ ಹುಟ್ಟುವ ಮೊದಲ ಗಂಡು ಮಕ್ಕಳಿಗೂ ಸೇರಿದಂತೆ ಸಮವಾಗಿ ಹಂಚಿಕೊಳ್ಳತಕ್ಕದ್ದಾಗಿದೆ. ನನ್ನ ಮೂರನೇ ಮಗ ಬಿ.ಎಸ್. ಗಂಗಾಧರ ಮತ್ತು ಆತನ ಹೆಂಡತಿ ಮತ್ತು ನನ್ನ ಸೊಸೆಯಾದ ಶ್ರೀಮತಿ ರೇಣುಕಾ ಗಂಗಾಧರ ರವರು ಮತ್ತು ಬಿ.ಎಸ್. ರವಿಶಂಕರ್ ಮತ್ತು ಆತನ ಪತ್ನಿ ವೈಶಾಲಿ ಮತ್ತು ಬಿ.ಎಸ್. ಪ್ರಭುಶಂಕರ್ ಹಾಗೂ ಆತನ ಪತ್ನಿ ಇವರುಗಳಿಗೆ ಸಂತಾನವಿಲ್ಲದಿದ್ದಲ್ಲಿ ಮಕ್ಕಳನ್ನು ದತ್ತು ತೆಗೆದುಕೊಳ್ಳಲು ಇಷ್ಟ ಪಟ್ಟರೆ ನನ್ನ ಗಂಡು ಮಕ್ಕಳಲ್ಲಿ ಯಾರಾದರೂ ಒಬ್ಬರ ಮಕ್ಕಳನ್ನು ದತ್ತು ತೆಗೆದುಕೊಳ್ಳತಕ್ಕದ್ದು ಹೊರತು ಬೇರೆ ಯಾರನ್ನೂ ದತ್ತು ತೆಗೆದುಕೊಳ್ಳುವಂತಿಲ್ಲ. ಹಾಗೇನಾದರೂ ಬೇರೆ ಮಕ್ಕಳನ್ನು ದತ್ತು ತೆಗೆದುಕೊಂಡಲ್ಲಿ ನಾನು ಕೊಟ್ಟಿರುವ ಆಸ್ತಿ ಆ ಮಕ್ಕಳಿಗೆ ಸೇರುವತಿತಿರುವದಿಲ್ಲ. ಮೇಲ್ಕಂಡ ಆಸ್ತಿಗಳು ನನ್ನ ಮರಣಾ ನಂತರ ಈ ರೀತ್ಯ ಸೇರುವ ಬಗ್ಗೆ ಬರೆದಿರುವ ವಿಚಾರದಲ್ಲಿ ನನ್ನ ನಂತರ ನನ್ನ ಮಕ್ಕಳು ಯಾರೇ ಆಸ್ತಿಗಳನ್ನು ಬಿಕರಿ ಮಾಡುವಂತ ಸಂದರ್ಭಕ್ಕೆ ಅದನ್ನು ನನ್ನ ಮಕ್ಕಳಲ್ಲಿ ಯಾರು ತೆಗೆದುಕೊಳ್ಳುತ್ತಾರೋ ಎಂಬುದರ ಬಗ್ಗೆ ಮೊದಲು ಪ್ರಾಶಸ್ತ್ಯ ಕೊಡತಕ್ಕದ್ದು. ಅವರು ಬೇಡವೆಂದು ಹೇಳಿ ಸಾಬೀತಾದಲ್ಲಿ ಎಲ್ಲರೂ ಸೇರಿ ಅವರ ಭಾಗದ ಸ್ವತ್ತನ್ನು ಬಿಕರಿ ಮಾಡಬಹುದಾಗಿರುತ್ತದೆ. ನನ್ನ ನಂತರ ನಾನೇನಾದರೂ ಯಾವದಾದರೂ ಬ್ಯಾಂಕಿನಲ್ಲಿ ಹಣ ವಗೈರೆ, ಠೇವಣಿ ಇಟ್ಟಿದ್ದಲ್ಲಿ ಅದನ್ನು ನನ್ನ ಐದು ಜನ ಗಂಡು ಮಕ್ಕಳು ಮತ್ತು ಮೂರನೇ ಸೊಸೆ ಶ್ರೀಮತಿ ರೇಣುಕಾ ಗಂಗಾಧರ ಇವರುಗಳು ಸೇರಿ ಅದನ್ನು ತೆಗೆದುಕೊಂಡು ಸಮನಾಗಿ ಹಂಚಿಕೊಳ್ಳತಕ್ಕದ್ದಾಗಿದೆ. ನನ್ನ ನಾಲ್ಕು ಜನ ಹೆಣ್ಣು ಮಕ್ಕಳಿಗೆ ಮತ್ತು ನನ್ನ ಅಣ್ಣನ ಮಗಳಾದ ಮುನಿರಾಮಕ್ಕ ಕೋಂ ಚಂದ್ರಯ್ಯ ಇವರಿಗೆ ನಾನು ಜೀವಿತದಿಂದ ಇರುವಾಗಲೇ ತಲಾ ಹದಿನೈದು ಸಾವಿರ ರೂಪಾಯಿ ಹಣ ಕೊಡುತ್ತೇನೆ. ನಾನು ಒಂದು ಪಕ್ಷ ಹಣ ಕೊಡದೇ ಮರಣ ಹೊಂದಿದರೆ ನನ್ನ ಗಂಡು ಮಕ್ಕಳು ಎಲ್ಲರೂ ಸೇರಿ ಹಣವನ್ನು ಪಾವತಿ ಮಾಡಿ ಪ್ರತ್ಯೇಕವಾದ ರಶೀದಿ ಹೊಂದತಕ್ಕದ್ದಾಗಿದೆ. ನಾನು ಚರ ಸ್ವತ್ತುಗಳಾದ ಚಿನ್ನ, ಬೆಳ್ಳಿ, ಫರ್ನೀಚರ್ ಇವೆಲ್ಲವನ್ನೂ ಹಿಂದೆ ಸಮನಾಗಿ ಹಂಚಿಕೊಟ್ಟಿರುತ್ತೇನೆ. ನನ್ನ ಮರಣಾ ನಂತರ ನನ್ನ

ಪುಟ 4ಕ್ಕೆ

SEAL OF THE SUB-REGISTRAR GANDHINAGAR BANGALORE

ಹೆಂಡತಿ ಜೀವಿತದಿಂದ ಇರುವ ತನಕ ನನ್ನ ಐದು ಜನ ಗಂಡು ಮಕ್ಕಳು ಮತ್ತು ನನ್ನ ಮೂರನೇ ಸೊಸೆ ಶ್ರೀಮತಿ ರೇಣುಕಾ ಗಂಗಾಧರ ಅವರುಗಳು ಒಬ್ಬರೂ ನೂರು ರೂಪಾಯಿಗಳಂತೆ ಪ್ರತಿ ತಿಂಗಳು ಅವರ ಜೀವನಕ್ಕೆ ಹಣವನ್ನು ಕೊಡತಕ್ಕದ್ದು. ಈ ಬಗ್ಗೆ ಅವರಿಂದ ರಶೀದಿ ಪಡೆಯತಕ್ಕದ್ದು. ಈ ರೀತ್ಯ ಹಣ ಪಾವತಿ ಮಾಡದೇ ಹೋದಲ್ಲಿ ನನ್ನ ನಂತರ ನನ್ನ ಹೆಂಡತಿ ಮೇಲ್ಕಂಡ ಯಾವುದೇ ಸ್ವತ್ತಿನಿಂದ ಬರುವ ವರಮಾನವನ್ನು ಕಾನೂನು ರೀತ್ಯ ಕ್ರಮ ಜರುಗಿಸಿ ಹಣವನ್ನು ಪಡೆದುಕೊಳ್ಳುವ ಹಕ್ಕುಳ್ಳವಳಾಗಿರುತ್ತಾಳೆ ಎಂದು ನನ್ನ ಆತ್ಮ ಸಂತೋಷದಿಂದ ಒಪ್ಪಿ ಬರೆಸಿಟ್ಟ ವಿಲ್ ಯಾನೆ ಮರಣ ಶಾಸನ ಪತ್ರ, ಸಹಿ. ಈ ವಿಲ್‌ನಲ್ಲಿ ಕಂಡ ಎಲ್ಲಾ ಅಂಶಗಳು ನನ್ನ ಮರಣಾ ನಂತರ ಜಾರಿಗೆ ಬರತಕ್ಕದ್ದಾಗಿದೆ.

(signature)

ಸಾಕ್ಷಿಗಳು :

1) (signature) HARISH. 57, 3RD B Cross Lalbagh Road Bangalore 560027.

2) (signature) B.S. RAVI SHANKAR. No: 31, V.S. RAJU ROAD KUMARA PARK WEST BANGALORE-560020.

3)

4)

Draft By
(signature)
(REVATHI)
Advocate,
No. 51, 8th Main
19th Cross, Malleshwaram
B'lore - 55.

24/09/2013